ಜೀತದಾಳಂಗಳ ಪುನರ್ ವಸತಿ ಬಗ್ಗೆ.

೧೮೭೦. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ರಾಜ್ಯದಲ್ಲಿ ಗುರುತಿಸಲ್ಪಟ್ಟ ಜೀತದಾಳಂಗಳ ಸಂಖ್ಯೆ ಎಷ್ಟು ?

೨) ಜೀತ ವಿಮುಕ್ತರಿಗೆ ಪುನರ್‌ವಸತಿ ಸೌಲಭ್ಯ ಪಡೆದಿರುವ ಜೀತದಾಳುಗಳ ಸಂಖ್ಯೆ ಎಷ್ಟು ?

೩) ಜೀತದಾಳುಗಳಿಗೆ ದೊರತಿರುವ ಪರಿಹಾರದ ಮೊತ್ತವೆಷ್ಟು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

೧) ೬೨೬೯

೨) ಕಡಿಮೆ ಬಡ್ಡಿದರ ಯೋಜನೆಯಲ್ಲಿ ಪುನರ್‌ವಸತಿ ಕಲ್ಪಿಸಿದವರ ಸಂಖ್ಯೆ ... ೯೯೮೭
ಕೇಂದ್ರ ಸರಕಾರದಿಂದ ಅನುದಾನ ಪಡೆದ ಯೋಜನೆಯಲ್ಲಿ ಪುನರ್ ವಸತಿ ಪಡೆದವರು ... ೨೬೫೭

(ಫೆಬ್ರುವರಿ ೮೬ರ ಅಂತ್ಯದ ವರೆಗೆ) ಒಟ್ಟು : ೩೬೫೬

೩) ರೂ. ೧೦,೧೧.೬೫೧ ಲಕ್ಷಗಳು. (ಫೆಬ್ರುವರಿ ೮೬ರ ಅಂತ್ಯದ ವರೆಗೆ)

ರಾಜ್ಯದಲ್ಲಿರುವ ಪಶುವೈದ್ಯ ಶಾಲೆಗಳು.

೩೮. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಪಶುಸಂಗೋಪನಾ ಹಾಗೂ ಪಶುವೈದ್ಯ ಸೇವೆಗಳ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕದಲ್ಲಿ ಎಷ್ಟು ಪಶುವೈದ್ಯ ಶಾಲೆಗಳಿವೆ ?

ಆ) ಇದರಲ್ಲಿ ಹೋಬಳಿ ಮಟ್ಟದಲ್ಲಿ ಎಷ್ಟು ಪಶುವೈದ್ಯ ಶಾಲೆಗಳಿವೆ ?

ಇ) ಹಾಗಿಲ್ಲದಿದ್ದಲ್ಲಿ ಹೋಬಳಿ ಮಟ್ಟದಲ್ಲಾದರೂ ಒಂದು ಪಶುವೈದ್ಯ ಶಾಲೆಯನ್ನು ಸ್ಥಾಪಿಸುವ ಬಗ್ಗೆ ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಶ್ರೀ ಸಿದ್ಧರಾಮಯ್ಯ (ಪಶುಸಂಗೋಪನೆ ಹಾಗೂ ಪಶುವೈದ್ಯ ಮಂತ್ರಿಗಳು).—

ಅ) ೧೨೩೩ (ಒಂದು ಸಾವಿರದ ಎರಡನೂರ ಮೂವತ್ತಮೂರು),

ಆ) ೫೦೭ (ಐದುನೂರ ಏಳು)

ಇ) ಇಲ್ಲ, ಆದರೆ ೭,೫೦೦ ದನಗಳ ಘಟಕಕ್ಕೆ ಒಂದು ಪಶುವೈದ್ಯ ಶಾಲೆಯಂತೆ ಹಂತ ಹಂತವಾಗಿ ತೆರೆಯುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿ ಹೈನಂಗಾರಿಕೆ ಅಭಿವೃದ್ಧಿ ಬಗ್ಗೆ.

೧೫೮೫. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು),—ಮಾನ್ಯ ಪಶುಸಂಗೋಪನಾ ಹಾಗೂ ಪಶುವೈದ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಎಷ್ಟು ಜಾನುವಾರುಗಳಿವೆ, ಆ ಪೈಕಿ ಹಸುಗಳೆಷ್ಟು ಹಾಗೂ ಎಮ್ಮೆಗಳೆಷ್ಟು,

ಆ) ಸದರಿ ಜಾನುವಾರುಗಳಿಂದ ಆನುಕ್ರಮವಾಗಿ ದಿನವೊಂದಕ್ಕೆ ಸಂಗ್ರಹಿಸುವ ಹಾಲಿನ ಪ್ರಮಾಣ ಎಷ್ಟು,

ಇ) ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಎಷ್ಟು ಹಾಲಂ ಕೊಡಲಾಗುತ್ತಿದೆ.

ಈ) ರಾಜ್ಯದಲ್ಲಿ ಅಮುಲ್ ಮಾದರಿಯ ಯೋಜನೆಯನ್ನು ತೆರೆಯಬೇಕೆಂಬ ಗುರಿಯನ್ನು ಹೊಂದಲಾಗಿದೆಯೇ,

ಉ) ಹಾಗಿದ್ದಲ್ಲಿ ಈ ಬಗ್ಗೆ ಸಾಧಿಸಿರುವ ಪ್ರಗತಿ ಏನು,

ಶ್ರೀ ಸಿದ್ದರಾಮಯ್ಯ(ಪಶುಸಂಗೋಪನಾ ಹಾಗೂ ಪಶುವೈದ್ಯ ಮಂತ್ರಿಗಳು).—

ಅ) ರಾಜ್ಯದಲ್ಲಿ ೧೯೮೩ರ ಗಣತಿಯ ಪ್ರಕಾರ ಜಾನುವಾರುಗಳ ಸಂಖ್ಯೆ. ೨.೬೧,೪೮, ೩೮೫ ಹಸುಗಳ ಸಂಖ್ಯೆ. ೩೯,೩೩,೫೮೩

ಎಮ್ಮೆಗಳ ಸಂಖ್ಯೆ. ೨೦,೨೬,೨೦೫

ಆ) ದಿನವೊಂದಕ್ಕೆ ೫೦೩೮ ಟನ್ನುಗಳಷ್ಟು ಅಂದಾಜು ಹಾಲು ಉತ್ಪಾದನೆಯಾಗುವ ನಿರೀಕ್ಷೆ ಇದೆ. ಹಸುಗಳಿಂದ. ೨೬೧೫ ಟನ್ನುಗಳು.

ಎಮ್ಮೆಗಳಿಂದ. ೨೩೨೩ ಟನ್ನುಗಳು.

ಇ) ೧೯೮೫ನೇ ಸಾಲಿನಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ದಿನವೊಂದಕ್ಕೆ ಸರಾಸರಿ ೪೫೯ ಟನ್ನುಗಳಷ್ಟು ಸರಬರಾಜು ಮಾಡಲಾಗಿದೆ.

ಈ) ಹೌದು.

ಉ) ಜನವರಿ ೧೯೮೬ ಅಂತ್ಯದವರೆಗೆ ೧೫೦೦ ಮಾದರಿಯ ೨೯೭೮ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಸಂಘಟಿಸಲಾಗಿದೆ ಮತ್ತು ೨೬೭೫ ಸಂಘಗಳು ಕಾರ್ಯಾಚರಣೆ ನಡೆಸುತ್ತಿವೆ.

ಹರಿಹರ ತಾಲ್ಲೂಕು ಭಾನುವಳ್ಳಿ ಗ್ರಾಮದಲ್ಲಿರುವ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಶಾಲೆಗಳ ಬಗ್ಗೆ.

೧೯೩೬. ಶ್ರೀ ಬಿ. ಜಿ. ಕೊಟ್ರಪ್ಪ (ಹರಿಹರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹರಿಹರ ತಾಲ್ಲೂಕು ಭಾನುವಳ್ಳಿ ಗ್ರಾಮದಲ್ಲಿರುವ ಪ್ರೈಮರಿ ಮತ್ತು ಮಿಡಲ್ ಸ್ಕೂಲುಗಳನ್ನು ಒಂದು ಮಾಡಲು ಸರ್ಕಾರ ಗಮನ ಹರಿಸುವುದೇ ?

ಆ) ಭಾನುವಳ್ಳಿ ಗ್ರಾಮದಲ್ಲಿರುವ ೧ ರಿಂದ ೭ನೇ ತರಗತಿವರೆವಿಗೆ ನಡೆಯುತ್ತಿರುವ ಮತ್ತು ನಡೆಸುತ್ತಿರುವ ಶಾಲೆಗಳನ್ನು ಒಂದು ಗೂಡಿಸಬೇಕೆಂದು ಇಲಾಖಾ ಪತಿಯಿಂದ ಅನುಮೋದನೆ ಕಳುಹಿಸಿದ್ದರೂ ಸರ್ಕಾರದವರು ಇದುವರೆವಿಗೂ ಕ್ರಮ ತೆಗೆದುಕೊಳ್ಳದೇ ಇರಲು ಕಾರಣವೇನು ?

ಇ) ಒಟ್ಟು ಗೂಡಿಸಿ ಒಬ್ಬ ಪದವೀಧರ ಮುಖ್ಯೋಪಾಧ್ಯಾಯರನ್ನು ನೇಮಿಸಬೇಕೆಂದು ಇದುವರೆವಿಗೂ ಕೇಳುತ್ತಾ ಬಂದಿದ್ದರೂ ಸರ್ಕಾರದವರು ಕ್ರಮ ತೆಗೆದುಕೊಳ್ಳದೇ ಇರಲು ಕಾರಣವೇನು ?

ಈ) ೧೯೮೬-೮೭ನೇ ಸಾಲಿನಿಂದಾದರೂ ಒಂದುಗೂಡಿಸಿ ಪದವೀಧರ ಮುಖ್ಯೋಪಾಧ್ಯಾಯರನ್ನು ನೇಮಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಎಂ. ರಘುಪತಿ(ಶಿಕ್ಷಣ ಮಂತ್ರಿಗಳು).—

ಅ) ಪರಿಶೀಲಿಸಲಾಗುವುದು.

ಆ) ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಇ) ಒಟ್ಟು ಗೂಡಿಸಿದ ನಂತರ ಮುಖ್ಯೋಪಾಧ್ಯಾಯರ ಹುದ್ದೆ ಮಂಜೂರು ಮಾಡಲು ಸರ್ಕಾರೀ ಆಜ್ಞೆ ಹೊರಡಿಸಲಾಗುವುದು.

ಈ) ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.